# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ವಾರ್ಡ್ ಸಂಖ್ಯೆ.49 ಲಿಂಗರಾಜಪುರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 05-01-2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು***

1) ಶ್ರೀಮತಿ ಲಾವಣ್ಯ ಗಣೇಶ್ ರೆಡ್ಡಿ, ಅಧ್ಯಕ್ಷರು, (ಬಿ.ಬಿ.ಎಂ.ಪಿ ಸದಸ್ಯರು)
2) ಶ್ರೀ ಸೂರ್ಯನಾರಾಯಣ ಬಾಬು, ಸದಸ್ಯರು
3) ಕನ್ನಡ ರಾಮು, ಸದಸ್ಯರು
4) ಶ್ರೀಮತಿ ರೇಷ್ಮ, ಸದಸ್ಯರು
5) ಶ್ರೀಮತಿ ಮಂಗಳಾ, ಸದಸ್ಯರು
6) ಶ್ರೀಮತಿ ಮಹಾಲಕ್ಷ್ಮಿ, ಸದಸ್ಯರು
7) ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ,
8) ಶ್ರೀ ಪಿ.ಜಯಶೀಲನ್, ಅಧ್ಯಕ್ಷರು, ಕೆ.ಎಸ್.ಎಫ್.ಸಿ ಲೇಔಟ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್,
9) ಶ್ರೀ ಎಸ್.ವೆಂಕಟರಮಣಸ್ವಾಮಿ, ಸದಸ್ಯರು
10) ಶ್ರೀ ರಾಮಕೃಷ್ಣಪ್ಪ.ಕೆ, ಸದಸ್ಯರು
11) ಶ್ರೀ ಉಮೇಶ್.ಆರ್, ಸದಸ್ಯರು

**ಈ ಸಭೆಗೆ ಹಾಜರಾಗಿದ್ದ** ಮೇಲ್ಕಂಡ ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರನ್ನು ಸಭೆಗೆ ವಾರ್ಡಿನ ಕಾರ್ಯದರ್ಶಿ ರವರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಪಿ.ಜಯಶೀಲನ್, ಅಧ್ಯಕ್ಷರು, ಕೆ.ಎಸ್.ಎಫ್.ಸಿ ಲೇಔಟ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್,** ರವರು ಮಾತನಾಡುತ್ತಾ, ಕೆ.ಎಸ್.ಎಫ್.ಸಿ ಲೇಔಟ್‌ನ ಸ್ಮಶಾನದ ಮುಂಭಾಗದಲ್ಲಿರುವ ಸೆಮಿ ಅಂಡರ್‌ಗ್ರೌಂಡ್ ಡಸ್ಟ್ ಬಿನ್‌ನಲ್ಲಿ ಬಿಬಿಎಂಪಿ ಕಸದ ವಾಹನಗಳು ಯಾವುದೇ ಕಾರಣಕ್ಕೂ ಹಾಕಬಾರದೆಂದು ಹಾಗೂ ಸಾರ್ವಜನಿಕರು ಮಾತ್ರ ಕಸವನ್ನು ಸದರಿ ಡಸ್ಟ್ ಬಿನ್ನು ಉಪಯೋಗಿಸಲು ಕೋರಿದರು. ಹಾಗೂ ಬೀದಿ ದೀಪದ ವಿದ್ಯುತ್ ಕಂಬಗಳಿಗೆ ಕಾಂಕ್ರೀಟ್ ಹಾಕಲು ಕೋರಿರುತ್ತಾರೆ.

2) **ಕನ್ನಡ ರಾಮು, ವಾರ್ಡ್ ಕಮಿಟಿ ಸದಸ್ಯರು,** ರವರು ಮಾತನಾಡುತ್ತಾ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವರ್ಗದ ಫಲಾನುಭವಿಗಳಿಗೆ ಒಂಟಿ ಮನೆ ನಿರ್ಮಾಣ ಮಾಡಲು ಜಾಬ್ ಕೋಡ್ ಮತ್ತು ಕಾರ್ಯಾದೇಶವನ್ನು ನೀಡಲು ಕೋರಿರುತ್ತಾರೆ.

3) **ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ ಮತ್ತು ವಾರ್ಡ್ ಕಮಿಟಿ ಸದಸ್ಯರು,** ರವರು ಮಾತನಾಡುತ್ತಾ, ಮುನಿತಾಯಪ್ಪ ಬಡಾವಣೆಯಲ್ಲಿ ನೀರಿನ ಸಮಸ್ಯೆ ಇರುವುದರಿಂದ ಹೊಸದಾಗಿ ಕೊರೆದಿರುವ ಬೋರ್‌ವೆಲ್‌ನಿಂದ ನೀರಿನ ಸಂಪರ್ಕ ಮಾಡಲು ಕೋರಿರುತ್ತಾರೆ.

4) **ಶ್ರೀ ಸೂರ್ಯನಾರಾಯಣ ಬಾಬು, ವಾರ್ಡ್ ಕಮಿಟಿ ಸದಸ್ಯರು, ರವರು ಮಾತನಾಡುತ್ತಾ,** ಜಗದೀಶ್ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿ ನಿರ್ಮಾಣ ಮಾಡಲು ಕೋರಿರುತ್ತಾರೆ ಹಾಗೂ ಸಿಸಿ ಕ್ಯಾಮೆರಾ ಅಳವಡಿಸಲು ಕೋರಿರುತ್ತಾರೆ.

5) **ಶ್ರೀಮತಿ ಮಹಾಲಕ್ಷ್ಮಿ, ವಾರ್ಡ್ ಕಮಿಟಿ ಸದಸ್ಯರು, ರವರು ಮಾತನಾಡುತ್ತಾ,** ಲಿಂಗರಾಜಪುರ ಚೌಡೇಶ್ವರಿ ದೇವಸ್ಥಾನದ ಮುಂಭಾಗದ ಪಾರ್ಕ್‌ನಲ್ಲಿ ಜಿಮ್ ಸಲಕರಣೆಗಳನ್ನು ಅಳವಡಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಹಾಗೂ ಸದರಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲು ಕೋರಿದರು.

6) **ಶ್ರೀ ಉಮೇಶ್.ಆರ್, ವಾರ್ಡ್ ಕಮಿಟಿ ಸದಸ್ಯರು, ರವರು ಮಾತನಾಡುತ್ತಾ,** ಕರಮಚಂದ್ 2ನೇ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ಒಳಚರಂಡಿ ಕಾಮಗಾರಿಯನ್ನು ಮಾಡಲು ಕೋರಿರುತ್ತಾರೆ ಹಾಗೂ ಕೆ.ಎಸ್.ಎಫ್.ಸಿ ಬಡಾವಣೆಯ ಸ್ಮಶಾಣದ ಮುಂಭಾಗ ಫೆನ್ಸಿಂಗ್ ಅಳವಡಿಸಲು ಕೋರಿರುತ್ತಾರೆ.

7) **ಶ್ರೀ ರಾಮಕೃಷ್ಣಪ್ಪ.ಕೆ, ಸದಸ್ಯರು, ಮಾತನಾಡುತ್ತಾ,** ಲಿಂಗರಾಜಪುರ ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ ತುಂಬಾ ಇದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗುತ್ತಿರುವುದಾಗಿ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರೊಂದಿಗೆ ಚರ್ಚಿಸಲು ಸೂಚಿಸಿರುತ್ತಾರೆ. ಹಾಗೂ ಸೇತ್ ಪಾಳ್ಯದಲ್ಲಿ ನೀರಿನ ಸಮಸ್ಯೆ ಇರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಸಭೆಯಲ್ಲಿ ಕೊನೆಯದಾಗಿ ಶ್ರೀಮತಿ ಲಾವಣ್ಯ ಗಣೇಶ್ ರೆಡ್ಡಿ ಬಿ.ಬಿ.ಎಂ.ಪಿ ಸದಸ್ಯರು ಹಾಗೂ ಅಧ್ಯಕ್ಷರು ಮಾತನಾಡುತ್ತಾ,

1) ತೋಟಗಾರಿಕೆ ಇಲಾಖೆ
2) ಪೋಲೀಸ್ ಇನ್ಸ್‌ಪೆಕ್ಟರ್ (ಸಂಚಾರ)
3) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಈ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ತಪ್ಪದೇ ಈ ಸಭೆಯಲ್ಲಿ ಭಾಗವಹಿಸಲು ತಿಳಿಸಬೇಕೆಂದು ಹೇಳಿದರು,

ಮುಂದುವರೆದು ಕೆ.ಎಸ್.ಎಫ್.ಸಿ ಲೇಔಟ್‌ನ ಸ್ಮಶಾನದ ಮುಂಭಾಗದಲ್ಲಿರುವ ಸೆಮಿ ಅಂಡರ್‌ಗ್ರೌಂಡ್ ಡಸ್ಟ್ ಬಿನ್‌ನಲ್ಲಿ ಬಿಬಿಎಂಪಿ ವಾಹನಗಳಿಂದ ಕಸವನ್ನು ಹಾಕದೇ ಇರಲು ಹಾಗೂ ಸಾರ್ವಜನಿಕರಿಗೆ ಸದರಿ ಡಸ್ಟ್ ಬಿನ್‌ನ್ನು ಉಪಯೋಗಿಸುವ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ರವರಿಗೆ ಸೂಚಿಸಿದರು. ಹಾಗೂ ಬೀದಿ ದೀಪದ ವಿದ್ಯುತ್ ಸುತ್ತಮುತ್ತ ಕಾಂಕ್ರೀಟ್‌ನಿಂದ ಭರ್ತಿ ಮಾಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವರ್ಗದ ಫಲಾನುಭವಿಗಳಿಗೆ ಒಂಟಿ ಮನೆ ನಿರ್ಮಾಣ ಮಾಡಲು ದಾಖಲಾತಿಗಳನ್ನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಯವರಿಗೆ ಸಲ್ಲಿಸಲಾಗಿದ್ದು, ಮೇಲಾಧಿಕಾರಿಯವರಿಗೆ ಒಂಟಿ ಮನೆ ನಿರ್ಮಾಣ ಮಾಡಲು ಕಾರ್ಯಾದೇಶವನ್ನು ನೀಡಲು ಕೋರಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಮುನಿತಾಯಪ್ಪ ಬಡಾವಣೆಯಲ್ಲಿ ನೀರಿನ ಸಮಸ್ಯೆ ಇರುವುದರಿಂದ ಹೊಸದಾಗಿ ಕೊರೆದಿರುವ ಕೊಳವೆ ಭಾವಿಯಿಂದ ನೀರಿನ ಸಂಪರ್ಕವನ್ನು ಪಡೆಯಲು ಸೂಚಿಸಲಾಯಿತು.

ಜಗದೀಶ್ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಕಾಂಕ್ರೀಟ್ ಚರಂಡಿ ನಿರ್ಮಾಣ ಮಾಡಲು ಈಗಾಗಲೇ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆಗೆ ಸಲ್ಲಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಲಿಂಗರಾಜಪುರ ಚೌಡೇಶ್ವರಿ ದೇವಸ್ಥಾನದ ಮುಂಭಾಗದ ಪಾರ್ಕ್‌ನಲ್ಲಿ ಜಿಮ್ ಸಲಕರಣೆಗಳನ್ನು ಅಳವಡಿಸಲು ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆ ಪಡೆಯಲು ಸೂಚಿಸಿದರು.

ಕರಮಚಂದ್ 2ನೇ ಮುಖ್ಯರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಒಳಚರಂಡಿ ನಿರ್ಮಾಣ ಕಾಮಗಾರಿಯು ಆದಷ್ಟು ಬೇಗ ಕೈಗೊಳ್ಳಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರಿಗೆ ಕೋರಲು ಸಭೆಯಲ್ಲಿ ತಿಳಿಸಿದರು.

ಈ ಮೇಲ್ಕಂಡ ವಿಷಯಗಳ ಬಗ್ಗೆ ವಾರ್ಡ್ ಸಭೆಯು ಅಗತ್ಯ ಕ್ರಮವಹಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಲಾವಣ್ಯ ಗಣೇಶ್ ರೆಡ್ಡಿ**
**ಕಾರ್ಪೊರೇಟರ್, ವಾರ್ಡ್ ಸಂಖ್ಯೆ.49**
**ಲಿಂಗರಾಜಪುರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

***ಪ್ರತಿಯನ್ನು***

1) ಅಪರ / ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ಸಹಾಯಕ ಅಭಿಯಂತರರು (ವಾರ್ಡ್ ಸಂಖ್ಯೆ.49) ರವರಿಗೆ
5) ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.